# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**

ನೊಂದಣಿ ಸಂಖ್ಯೆ :

## ಪಿಎಸ್‌ಐ ಪತ್ರಿಕೆ – 1

**ಪ್ರಶ್ನೆಗಳು**

**ಅಂಕಗಳು : 100**

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

ಹೆಸರು :

ಮೊಬೈಲ್ ನಂ :

**02-01-2022**

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

1. ಭಾರತದಲ್ಲಿ ಹೆಚ್ಚಾಗುತ್ತಿರುವ ಮಾದಕ ವ್ಯಸನತೆ. ಯುವಜನರ ಮೇಲೆ ಪ್ರಭಾವವನ್ನು ವಿವರಿಸಿ ಮತ್ತು ನ್ಯಾಯಾಲಯಗಳ ತೀರ್ಪುಗಳ ಕುರಿತು ಚರ್ಚಿಸಿರಿ.

ಅಥವಾ

2. ಆರೋಗ್ಯದ ಹಕ್ಕು ಸವಾಲುಗಳು & ಅವಕಾಶಗಳು

ಅಥವಾ

3. ಡಿಜಿಟಲ್ ಮಾಧ್ಯಮದ ನಿಯಂತ್ರಣ ಅಗತ್ಯವೇ?

ಅಥವಾ

4. ವಿಪತ್ತು ನಿರ್ವಹಣೆಯಲ್ಲಿ ಪೂರ್ವಸಿದ್ಧತೆಯ ಪಾತ್ರ

ಅಥವಾ

5. ಕೃತಕ ಬುದ್ಧಿಮತ್ತೆ ಸಾಧಕ ಮತ್ತು ಬಾಧಕಗಳು

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಬಾಂಗ್ಲಾದೇಶ ತನ್ನ ಸ್ವಾತಂತ್ರ್ಯ ಸುವರ್ಣ ಮಹೋತ್ಸವವನ್ನು ಇತ್ತೀಚಿಗೆ ಆಚರಿಸಿಕೊಂಡಿತು. ಬಾಂಗ್ಲಾ ವಿಮೋಚನೆಗೆ 50 ವರ್ಷ ಎಂದರೆ ಅದು ಇತಿಹಾಸದ ಒಂದು ಮಹತ್ವಪೂರ್ಣ ಅಧ್ಯಾಯವನ್ನು ನೆನಪು ಮಾಡಿಕೊಳ್ಳಬೇಕಾದ ಸಂದರ್ಭ. 'ಬಾಂಗ್ಲಾ ವಿಮೋಚನಾ ಯುದ್ಧ' ಪಾಕ್ ಸೇನೆಯ ಕ್ರೌರ್ಯ, ಅಮೆರಿಕದ ಬೂಟಾಟಿಕೆ, ಭಾರತದ ಸಾಮರ್ಥ್ಯವನ್ನು ಜಗತ್ತಿಗೆ ಕಾಣಿಸಿದ ಐತಿಹಾಸಿಕ ವಿದ್ಯಮಾನ. ಹಾಗಾಗಿ 'ಬಾಂಗ್ಲಾ ವಿಮೋಚನೆ' ಎಂದರೆ ಶೇಕ್ ಮುಜಿಬರ್ ರೆಹಮಾನರ ಜೊತೆಗೆ ಇಂದಿರಾ ಗಾಂಧಿ, ನಿಕ್ಸನ್ ಹಾಗೂ ಕಿಸ್ಸಿಂಜರ್ ದ್ವಯರು, ಪಿ.ಎನ್.ಹಕ್ಸರ್, ಎಲ್.ಕೆ.ಝಾ, ಟಿ.ಎನ್.ಕೌಲ್‌ರಂತಹ ರಾಜತಾಂತ್ರಿಕ ನಿಪುಣರು, ಮಾಣಿಕ್ ಷಾರಂತಹ ಸೇನಾನಿಗಳು ಕೂಡ ನೆನಪಾಗಬೇಕು.

ಹಾಗೆ ನೋಡಿದರೆ, 1947ರಲ್ಲಿ ಒಂದು ರಾಷ್ಟ್ರವಾಗಿ ಜನ್ಮತಾಳುವಾಗಲೇ ಪಾಕಿಸ್ಥಾನ ಒಡೆದುಹೋಗಿತ್ತು ಪಶ್ಚಿಮ ಪಾಕಿಸ್ತಾನದ ಮುಸ್ಲಿಮರು, ಪೂರ್ವಪಾಕಿಸ್ತಾನದ ಮುಸ್ಲಿಮರನ್ನು ತುಚ್ಛವಾಗಿ ಕಾಣುತ್ತಿದ್ದರು. ಲಿಯಾಕತ್ ಅಲಿಖಾನ್ ನೇತೃತ್ವದ ಸರ್ಕಾರಕ್ಕೆ ಆಡಳಿತ ನಿರ್ವಹಣೆ ಅಸಾಧ್ಯ ಎನಿಸಿತ್ತು. 1958ರಲ್ಲಿ ಪಾಕಿಸ್ತಾನ ಸೇನೆ ಆಡಳಿತವನ್ನು ತೆಕ್ಕೆಗೆ ತೆಗೆದುಕೊಂಡಿತು. ಸ್ವತಂತ್ರಗೊಂಡ 23 ವರ್ಷಗಳ ಬಳಿಕ, ಅಂದರೆ 1970ರಲ್ಲಿ ಪಾಕಿಸ್ತಾನ ಮೊದಲ ಸಾರ್ವತ್ರಿಕ ಚುನಾವಣೆಗೆ ಅಣಿಯಾಯಿತು. ಪಶ್ಚಿಮ ಪಾಕಿಸ್ತಾನದಲ್ಲಿ ಭುಟ್ಟೊ ನಾಯಕತ್ವದ 'ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ' ಗೆದ್ದರೆ, ಪೂರ್ವ ಪಾಕಿಸ್ತಾನದಲ್ಲಿ ಮುಜೀಬ್ ನೇತೃತ್ವದ 'ಅವಾಮಿ ಲೀಗ್' ಹೆಚ್ಚಿನ ಸ್ಥಾನ ಗಳಿಸಿತು. ಆದರೆ ಆಡಳಿತವನ್ನು ಪ್ರಜಾ ಸರ್ಕಾರಕ್ಕೆ ಬಿಟ್ಟುಕೊಡಲು ಸೇನಾ ನಾಯಕ ಯಾಹ್ಯಾಖಾನ್ ಸಿದ್ಧರಿರಲಿಲ್ಲ.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

**Translate the following paragraph from English to Kannada.**

**The song of India is a poem, we have two speakers. One is the poet himself and the other is the Mother of India. This poem goes on with the conversation between the poet and Mother India. In their conversation, the poet wants to glorify India by singing the song of mother India with its glory. In contrast, mother India wants to purify herself by telling the poet to sing a song with a sense of purification.**

**The conversation goes on like this. The poet wants to sing a song of the Himalayas with their snow-born peaks, a song of the their seas, which wash the palm of mother India, and the song of the clear dawn with its pure gold-streaks. But mother India very calmly told the poet to sing a song of the beggars and leapers who rush into her streets and told him to sing the song of filth and dirt tfat disturb the peaceful atmosphere. Then, the poet expressed his desire to sing a song of rock-cut temples, which are epics in stone, the song of freedom fighters who gave their lives for mother India , and song of the seer and prophets, who showed the path of eternity.**

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

ಇತ್ತೀಚಿಗೆ ಅನಾರೋಗ್ಯದ ನಿಮಿತ್ತ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಚಿಕ್ಕ ವಯಸ್ಸಿನ ಮಕ್ಕಳಿಬ್ಬರು ತಮ್ಮ ಅಂಗಾಲುಗಳಿಗೆ ಅಗಲವಾದ ಪಟ್ಟಿ ಕಟ್ಟಿಸಿಕೊಂಡು ಕೂತಿದ್ದರು. ಬಿಳಿಯ ಪಟ್ಟಿಯ ಮೇಲೆ ಕೆಂಪು ರಕ್ತದ ಕಲೆ ಢಾಳಾಗಿ ಕಾಣುತ್ತಿತ್ತು. ಮಕ್ಕಳ ಗಾಯದ ಕುರಿತು ಆತಂಕಗೊಂಡು ಶುಶ್ರೂಷಕರನ್ನು ವಿಚಾರಿಸಿದಾಗ, ಆ ಮಕ್ಕಳು ಸ್ಥಳೀಯ ಶಾಲೆಯ ಬಯಲಿನಲ್ಲಿ ಆಡುವಾಗ, ಒಡೆದ ಮದ್ಯದ ಶೀಷೆಯ ಚೂರುಗಳು ನೆಟ್ಟು ಗಾಯಗೊಂಡಿದ್ದಾರೆ ಎಂಬುದು ಗೊತ್ತಾಯಿತು. ಅಲ್ಲದೆ ಈ ರೀತಿಯ ಅಪಘಾತಗಳು ವಾರದಲ್ಲಿ ಕನಿಷ್ಟ ಎರಡಾದರೂ ಸಂಭವಿಸುತ್ತಲೇ ಇರುತ್ತವೆ ಎಂಬುದು ತಿಳಿದು ಖೇದವಾಯಿತು. ಪ್ರಸ್ತುತ ಶಾಲೆ, ರಸ್ತೆಗಳು, ಹೊಲಗಳು, ನೀರಿನ ಆಕರಗಳು, ದೇವಸ್ಥಾನದ ಅಂಗಳ ಸೇರಿದಂತೆ ಬಯಲು ಗದ್ದೆಗಳಲ್ಲಿ ಎಲ್ಲಿ ನೋಡಿದರಲ್ಲಿ ಮದ್ಯದ ಶೀಷೆಗಳು ರಾಶಿ ರಾಶಿಯಾಗಿ ಬಿದ್ದಿರುತ್ತವೆ. ಅವುಗಳನ್ನು ಕೆಲವು ಕಿಡಿಗೇಡಿಗಳು ಒಡೆದು ಹೋಗುತ್ತಾರೆ. ಈ ಗಾಜಿನ ತುಂಡುಗಳು ಹರಿತವಾಗಿದ್ದು ಕೆಲದಿನಗಳಲ್ಲಿಯೇ ಮಣ್ಣಿನಲ್ಲಿ ಹೂತುಹೋಗಿ ಬೇಟೆಗಾಗಿ ಹೊಂಚುಹಾಕಿ ಕೂರುತ್ತವೆ. ಕಾಲಿಗೆ ಚಪ್ಪಲಿ ಧರಿಸಲೂ ಶಕ್ತರಲ್ಲದ ಅನೇಕ ಜನ ವೃದ್ಧರು, ಮಕ್ಕಳು ಇವುಗಳನ್ನು ಅಚಾನಕ್ಕಗಿ ತುಳಿದು ತತ್ತರಿಸಿಹೋಗುತ್ತಾರೆ. ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗಲೂ ಈ ಗಾಜಿನ ಚೂರುಗಳನ್ನು ತುಳಿದು ಗಾಯಗೊಂಡ ಉದಾಹರಣೆಗಳಿದ್ದು, ಎಷ್ಟೋ ಬಾರಿ ಜಾನುವಾರುಗಳು ಸಹ ಗಾಯಗೊಂಡು ಮೂಕರೋದನೆ ಅನುಭವಿಸುತ್ತವೆ.

ಹೀಗೆ ಗಾಯಗೊಂಡ ಬಹುತೇಕರಿಗೆ ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದೆ ಸುದೀರ್ಘವಾಗಿ ನರಳುವಂತಾಗುತ್ತದೆ. ಕೆಲವು ಗಂಭೀರ ಪ್ರಕರಣಗಳಲ್ಲಿ ಸಣ್ಣ ಶಸ್ತ್ರಚಿಕಿತ್ಸೆ ಮತ್ತು ದೀರ್ಘಕಾಲದ ವಿಶ್ರಾಂತಿಯೂ ಬೇಕಾಗುತ್ತದೆ. ಅದರಲ್ಲೂ ಗಾಯಗೊಂಡವರು ಮಧುಮೇಹಿಗಳಾಗಿದ್ದರಂತೂ ಅವರ ಗೋಳು ದೇವರಿಗೇ ಪ್ರೀತಿ. ಆದ್ದರಿಂದ ಅಬಕಾರಿ ಸಚಿವರು ಈ ಬಗ್ಗೆ ಗಂಭೀರವಾಗಿ ಯೋಚಿಸಿ ಶಾಶ್ವತ ಪರಿಹಾರಕ್ಕೆ ಮುಂದಾಗಬೇಕಿದೆ. ಖಾಲಿ ಶೀಷೆಗಳನ್ನು ಮದ್ಯ ಮಳಿಗೆಗಳಿಂದಲೇ ಮರುಖರೀದಿಸುವ ಇಲ್ಲವೇ ಮರುಬಳಕೆಗೆ ಬರುವಂತಹ ವಸ್ತುಗಳಿಂದ ಇಲ್ಲವೇ ಮಣ್ಣಿನ ಅಥವಾ ಪ್ಲಾಸ್ಟಿಕ್‌ನಿಂದ ಶೀಷೆಗಳನ್ನು ತಯಾರಿಸುವ ದಿಸೆಯಲ್ಲಿ ಇಲಾಖೆ ಕಾರ್ಯೋನ್ಮುಖವಾಗಬೇಕಿದೆ.

ವಿದ್ಯಾಕಾಶಿ ಕರಿಯರ್ ಅಕಾಡೆಮಿ